ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 08, Iss 01, 2019

# ಕನ್ನಡ ಮಹಿಳಾ ಕಾದಂಬರಿಗಳಲ್ಲಿ ಪಿತೃಪ್ರಾಧಾನ್ಯದ ನೆಲೆಗಳು

**Dr. Bharathidevi P**
Assistant Professor of Kannada, GFGC for Womens (Home Science),
Holenarasipura-573211

ಆಧುನಿಕ ಕನ್ನಡ ಸಾಹಿತ್ಯ ರೂಪುಗೊಂಡದ್ದು ವಸಾಹತುಶಾಹಿಯ ಸಂದರ್ಭದಲ್ಲಿ. ಇದು ಒಂದು ಬಗೆಯ ಸಂಕ್ರಮಣ ಕಾಲ. ಈ ಹೊತ್ತಿನಲ್ಲಿ ಒಂದೆಡೆ ಪಾಶ್ಚಾತ್ಯ ಶಿಕ್ಷಣ ಪಡೆದು ಮುನ್ನಡೆಯುವ ಹಂಬಲವಿದ್ದರೆ ಇನ್ನೊಂದೆಡೆ ಪಾಶ್ಚಾತ್ಯರ ಆಕ್ರಮಣದ ಸಂದರ್ಭದಲ್ಲಿ ನಮ್ಮತನವನ್ನು ಕಳೆದುಕೊಳ್ಳಬಾರದು ಎಂಬ ಕೆಚ್ಚಿನೊಂದಿಗೆ ಪರಂಪರೆಯನ್ನು, ಸಂಪ್ರದಾಯವನ್ನು ಎತ್ತಿಹಿಡಿಯುವ ಬಗೆಯೂ ಕಾಣಿಸುತ್ತದೆ. ಈ ಕಾಲಘಟ್ಟದಲ್ಲಿದ್ದ ಆಧುನಿಕತೆ ಮತ್ತು ಪರಂಪರೆಗಳ ನಡುವಣ ಸಂಘರ್ಷ ಮತ್ತು ಅನುಸಂಧಾನ ಈ ಕಾಲದ ಬರವಣಿಗೆಗಳಲ್ಲೂ ಪ್ರತಿಫಲನಗೊಂಡಿರುವುದನ್ನು ನೋಡುತ್ತೇವೆ. ಮತ್ತು ಪಿತೃಪ್ರಾಧಾನ್ಯದ ಹೆಣಿಗೆಗಳು ಇವುಗಳ ಜೊತೆಗೆ ಬೆಸೆದುಕೊಂಡೇ ಇರುವುದನ್ನು ಕೂಡಾ ಗಮನಿಸಬಹುದು.

ಪಾಶ್ಚಾತ್ಯ ಶಿಕ್ಷಣ ಹಾಗೂ ಸಾಹಿತ್ಯದ ಪ್ರಭಾವದಿಂದ ಮಧ್ಯಮ ವರ್ಗ ಒಂದು ಹೊಸ ಪ್ರಜ್ಞೆಯನ್ನು ಗಳಿಸಿಕೊಂಡಿತು. ಇದರ ಫಲವಾಗಿ ನಮ್ಮಲ್ಲಿ ಕಾದಂಬರಿ ಪ್ರಕಾರ ಹುಟ್ಟಿಕೊಂಡಿತು. ಕನ್ನಡದಲ್ಲಿ ಮಹಿಳೆಯರು ಕಥನ ಪ್ರಕಾರದಲ್ಲಿ ಅಭಿವ್ಯಕ್ತಿ ಆರಂಭಿಸಿದ್ದು ಇದೇ ಸಂದರ್ಭದಲ್ಲಿ. ಕಥನ ಎನ್ನುವುದು ಕಥೆ ಮತ್ತು ಕಾದಂಬರಿ ಎರಡೂ ಪ್ರಕಾರಗಳನ್ನು ಒಳಗೊಳ್ಳುತ್ತದೆ. ಮಹಿಳಾ ಕಥನಗಳು ತಮ್ಮ ಒಡಲೊಳಗೆ ಈ ಸಂಘರ್ಷವನ್ನು ಹೊತ್ತುಕೊಂಡೇ ಉದ್ದಕ್ಕೂ ಬಂದಿರುವುದನ್ನು ಗಮನಿಸಬಹುದು. ಹಿಂದಿನಿಂದಲೂ ನಮ್ಮ ಸಮಾಜ ಸಂಸ್ಕೃತಿ, ಸಂಪ್ರದಾಯಗಳನ್ನು ಕಾಪಿಟ್ಟುಕೊಂಡು ಹೋಗುವ ಹೊಣೆಯನ್ನು ಸ್ತ್ರೀಯರ ಮೇಲೆ ಹೊರಿಸುತ್ತಾ ಬಂದಿರುವುದನ್ನು ನೋಡುತ್ತೇವೆ. ಆಧುನಿಕ ಶಿಕ್ಷಣಕ್ಕೆ ಅತ್ಯಂತ ಸಣ್ಣ ಪ್ರಮಾಣದಲ್ಲಿ ಮಹಿಳೆಯರು ತೆರೆದುಕೊಂಡದ್ದು ಎಬ್ಬಿಸಿದ ಅಲೆ ಬೇರೆ ಬೇರೆ ಬಗೆಯ ವಾಗ್ವಾದಗಳಿಗೆ ಕಾರಣವಾಯಿತು. ಇದು ಕೇವಲ ಮಹಿಳೆಯರಷ್ಟೇ ಅಲ್ಲ ಅಂದು ಬರೆಯುತ್ತಿದ್ದ ಪುರುಷರ ಕೃತಿಗಳಲ್ಲೂ ಅನುರಣನಗೊಂಡಿದೆ.

ಪಿತೃಪ್ರಾಧಾನ್ಯ ಎನ್ನುವುದು ಸರ್ವಾಂತರ್ಯಾಮಿಯಾದುದು. ಅದು ನಮ್ಮ ಬದುಕಿನ ಪ್ರತಿಯೊಂದು ನಡೆಯಲ್ಲೂ ಹಾಸುಹೊಕ್ಕಾಗಿದೆ. ಇದನ್ನು ಮುಖಾಮುಖಿಯಾಗುವುದು ಅನಿವಾರ್ಯ. ಧರ್ಮ, ಅಧಿಕಾರ, ಜಾತಿ, ವರ್ಗ, ಲಿಂಗತ್ವ ಎಲ್ಲವೂ ಪಿತೃ ಸಂಸ್ಕೃತಿಯ ಬೇರೆ ಬೇರೆ ಹೊರರೂಪಗಳು. ಇದಕ್ಕೆ ಕೆಲವೊಮ್ಮೆ ಉತ್ತರಿಸುತ್ತಾ, ಒಪ್ಪಿಸುತ್ತಾ, ಕೆಲವೊಮ್ಮೆ ಇದನ್ನು ಪ್ರಶ್ನಿಸುತ್ತಾ, ಕೆಲವೊಮ್ಮೆ ನಿರಾಕರಿಸುತ್ತಾ ಬಂದಿರುವುದು ಉದ್ದಕ್ಕೂ ಕಾಣುತ್ತದೆ. ಹೀಗೆ ಒಟ್ಟು ಮಹಿಳೆಯರ ಕಥನಗಳನ್ನು, ಮಹಿಳೆಯರು ಕೇಂದ್ರವಾಗಿ ರಚಿತವಾದ ಕಥನಗಳನ್ನು ಗಮನಿಸಿದಾಗ ಕೆಲವು ಕಡೆಗಳಲ್ಲಿ ಸ್ಥಾಪಿತ ಚೌಕಟ್ಟಿನೊಳಗೆ ಅವಕಾಶ ಕಲ್ಪಿಸಿಕೊಳ್ಳುವ ಬಗೆ ಕಂಡರೆ ಇನ್ನು ಕೆಲವು ಕಡೆ ಪಿತೃ ಸಂಸ್ಕೃತಿಯನ್ನು ಪ್ರಶ್ನಿಸುವ ರೀತಿ, ಮತ್ತು ಕೆಲವು ಕಡೆಗಳಲ್ಲಿ ಈ ಚೌಕಟ್ಟಿನಾಚೆಗೆ ತಮ್ಮದೇ ಆದ ನೆಲೆ ಕಂಡುಕೊಳ್ಳುವ ಸಾಧ್ಯತೆಯ ಹುಡುಕಾಟ ಕಾಣುತ್ತದೆ.

ವಸಾಹತುಶಾಹಿ ಕಾಲಘಟ್ಟ ನಮ್ಮತನ ಯಾವುದು? ಭಾರತೀಯತೆ ಅಂದರೆ ಯಾವುದು? ಎಂಬ ಪ್ರಶ್ನೆಯನ್ನು ಮುಖಾಮುಖಿಯಾಗುವ ಚಾರಿತ್ರಿಕ ಸಂದರ್ಭವನ್ನು ಸೃಷ್ಟಿಸಿತು. ಜೊತೆಜೊತೆಗೇ ವಿದ್ಯಾವಂತರಾದ ಹೆಣ್ಣುಮಕ್ಕಳು ಅಭಿವ್ಯಕ್ತಿ ಮಾಡುವ ಅವಕಾಶವೂ ಸೃಷ್ಟಿಯಾಯಿತು. ಆರಂಭಕಾಲದ ಕಥನಗಳು ಸ್ತ್ರೀಕೇಂದ್ರಿತ ಕಥನಗಳೇ ಆಗಿರುವುದನ್ನು ಗಮನಿಸಬಹುದು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಎಂದು ಗುರುತಿಸಲ್ಪಡುವ ಗುಲ್ವಾಡಿ ವೆಂಕಟ್ರಾಯರ 'ಇಂದಿರಾಬಾಯಿ, ಬೋಳಾರ ಬಾಬೂರಾಯರ 'ವಾಗ್ದೇವಿ, ಕನ್ನಡದ ಮೊದಲ ಮಹಿಳಾ ಕಾದಂಬರಿ ಶಾಂತಾಬಾಯಿ ನೀಲಗಾರ ಅವರ

'ಸದ್ಗುಣಿ ಕೃಷ್ಣಾಬಾಯಿ'(೧೯೦೮) ಇವೆಲ್ಲವೂ ಹೆಣ್ಣಿನ ಸುತ್ತ ಹೆಣೆದುಕೊಂಡ ಕಾದಂಬರಿಗಳು. ಸಾಂಪ್ರದಾಯಿಕತೆಯ ಮಧ್ಯದಲ್ಲಿ ನಲುಗುವ ಹೆಣ್ಣು, ಶಿಕ್ಷಣ ಪಡೆದ ಹೆಣ್ಣು, ಈ ಸಂದರ್ಭದ ಸಂದಿಗ್ಧಗಳು ಈ ಕೃತಿಗಳಲ್ಲಿ ಚಿತ್ರಿತಗೊಂಡಿವೆ. ಬಾಲ್ಯ ವಿವಾಹದ ಕೇಡು, ವಿಧವಾ ವಿವಾಹ ಕುರಿತಾದ ಒಲವು, ಶಿಕ್ಷಣದ ಮಹತ್ವ ಇವು ಮತ್ತೆ ಮತ್ತೆ ಚರ್ಚಿತವಾದ ಸಂಗತಿಗಳು. ಶಿಕ್ಷಣ ಮಹಿಳೆಯರ ಬದುಕಿನಲ್ಲಿ ಯಾವ ರೀತಿಯ ಬದಲಾವಣೆ ಉಂಟುಮಾಡಬಹುದು, ಇದು ಸಾಂಪ್ರದಾಯಿಕ ಸಮಾಜಕ್ಕೆ ಒಡ್ಡಬಹುದಾದ ಸವಾಲು ಏನು? ಎಂಬ ಪ್ರಶ್ನೆಗಳು ಇಲ್ಲಿ ಮುಖ್ಯವಾದವು. ಇದರಿಂದ ಉಂಟಾದ ಸಂಘರ್ಷ ಇವೇ ಕಾಳಜಿಗಳು ಮತ್ತು ಪ್ರಶ್ನೆಗಳು ಬೇರೆ ಬೇರೆ ಬಗೆಯಲ್ಲಿ ಮಹಿಳಾ ಕಾದಂಬರಿಗಳಲ್ಲಿ ವ್ಯಕ್ತವಾಗುತ್ತಾ ಬಂದಿವೆ.

ಮಾಸ್ತಿಯವರು ತಿರುಮಲಾಂಬಾ ಅವರ ಕಾದಂಬರಿಯ ಹಿನ್ನೆಲೆಯಲ್ಲಿ ಎತ್ತಿದ ತಕರಾರನ್ನು ಇಲ್ಲಿ ಪ್ರಸ್ತಾಪಿಸುವುದು ಬಹಳ ಮುಖ್ಯ. ತಿರುಮಲಾಂಬಾ ಅವರು ತಮ್ಮ ಸತಿ ಹಿತೈಷಿಣಿ ಗ್ರಂಥಮಾಲೆಯ ಮೂಲಕ ಅನೇಕ ಕೃತಿಗಳನ್ನು ಹೊರತಂದಿರುವುದು ಎಲ್ಲರಿಗೂ ತಿಳಿದ ವಿಷಯ. ಅವರ 'ವಿದ್ಯುಲ್ಲತಾ' ಕಾದಂಬರಿಯನ್ನು ಇಟ್ಟುಕೊಂಡು ಒಟ್ಟು ಕಾದಂಬರಿಗಳ ಹಿನ್ನೆಲೆಯಲ್ಲಿ ಮಾಸ್ತಿಯವರು ಕೃಷ್ಣಸೂಕ್ತಿ ಅನ್ನುವ ಪತ್ರಿಕೆಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ಅವರು ಇಲ್ಲಿ ಸಾಂಪ್ರದಾಯಿಕ ಪಾತ್ರ, ಧರ್ಮಗಳನ್ನು ಕಾದಂಬರಿಯ ಪಾತ್ರಗಳು ಪ್ರಶ್ನೆ ಮಾಡುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾದಂಬರಿ(ನಾವಲು) ಅನ್ನುವ ಆಧುನಿಕ ಪ್ರಕಾರದ ಬದಲಿಗೆ ನಮ್ಮದೇ ಆದ ಪ್ರಕಾರವೊಂದರಲ್ಲಿ ಬರೆದರೆ ಹೇಗಿತ್ತು? ಎನ್ನುವ ಪ್ರಶ್ನೆಯೂ ಅಲ್ಲಿದೆ. ಜೊತೆಗೆ ಇಲ್ಲಿ ಭಾಷೆಯ ಬಗ್ಗೆ, ಕಾದಂಬರಿಯ ರಚನೆಯ ಬಗ್ಗೆ ಮಾತಾಡುವುದರಾಚೆಗೆ ಅವರ ಬಹಳ ದೊಡ್ಡ ಆಕ್ಷೇಪಣೆ ಇರುವುದು ಕಾದಂಬರಿಯಲ್ಲಿ ವ್ಯಕ್ತವಾಗುವ ಮನೋಧರ್ಮದ ಬಗ್ಗೆ. ಕುವೆಂಪು ಅವರು 'ಶೂದ್ರ ತಪಸ್ವಿ' ಬರೆದಾಗ ಮಾಸ್ತಿಯವರು ಪ್ರತಿಕ್ರಿಯಿಸಿದ ಬಗೆಯನ್ನೂ ಇದರ ಜೊತೆಗಿರಿಸಿ ನೋಡಬಹುದು. ಇದು ಆ ಸಂದರ್ಭದಲ್ಲಿ ಸಾಂಪ್ರದಾಯಿಕತೆಯನ್ನು ಪ್ರಶ್ನಿಸಿದಾಗ ಅದು ಹುಟ್ಟುಹಾಕಿದ ತಲ್ಲಣಗಳಿಗೆ ಕನ್ನಡಿ ಹಿಡಿಯುತ್ತದೆ.

ಮೊದಲಘಟ್ಟದ ಕಾದಂಬರಿಕಾರ್ತಿಯರಲ್ಲಿ ಬಾಲ್ಯ ವಿವಾಹ ವಿರೋಧಿ ನಿಲುವು, ವಿಧವಾ ವಿವಾಹದ ಬಗ್ಗೆ ದ್ವಂದ್ವಾತ್ಮಕ ನಿಲುವು, ವರದಕ್ಷಿಣೆ ಬಗ್ಗೆ ವಿರೋಧ, ಹೆಣ್ಣುಮಕ್ಕಳಿಗೆ ಶಿಕ್ಷಣಕ್ಕೆ ಆದ್ಯತೆ ಎದ್ದು ಕಾಣುತ್ತವೆ. ತಿರುಮಲಾಂಬಾ ಅವರ 'ಮಾತೃನಂದಿನಿ' ಕಾದಂಬರಿಯಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡದೇ ಸಣ್ಣವಯಸ್ಸಿನಲ್ಲಿ ಮದುವೆ ಮಾಡಿದರೆ ಅವರ ಬದುಕು ಹೇಗೆ ನಲುಗಿ ಹೋಗತ್ತೆ ಅನ್ನುವುದನ್ನು ನಂದಿನಿ ಅನ್ನುವ ಪಾತ್ರ ಹೇಳುತ್ತದೆ. 'ನಭಾ'ಕಾದಂಬರಿಯಲ್ಲಿ ಬರುವ ನಭಾ, 'ವಿರಾಗಿಣಿ' ಕಾದಂಬರಿಯಲ್ಲಿ ಬರುವ ಪಾತ್ರಗಳು ಮೌಢ್ಯವನ್ನು ಎದುರಾಗುತ್ತವೆ. 'ಆಚಾರವಿಲ್ಲದ ಶುಂಠನಾದ ಬ್ರಾಹ್ಮಣನಿಗೆ ನೀರು ಕೊಡುವುದಕ್ಕಿಂತ ನಾನು ಬೇರೆ ಯಾವುದಾದರೂ ಒಳ್ಳೆ ಕೆಲಸ ಮಾಡುತ್ತೇನೆ' ಎಂದು ನಭಾ ಹೇಳುತ್ತಾಳೆ. ಹಾಗೇ ವಿರಾಗಿಣಿ ಕಾದಂಬರಿಯಲ್ಲಿ ದೇವಸ್ಥಾನಕ್ಕೆ ಹೋಗುವುದಕ್ಕಿಂತ ಮಾಡಬಹುದಾದ ಬೇರೆ ಒಳ್ಳೆ ಕೆಲಸಗಳಿವೆ ಎನ್ನುವ ಅಭಿಪ್ರಾಯ ಬರುತ್ತದೆ. ಮಾಸ್ತಿಯವರ ತಕರಾರು ಕೂಡಾ ಇಂತಹ ವಿಚಾರಗಳನ್ನು ಕುರಿತೇ ಎಂಬುದನ್ನು ಗಮನಿಸಬೇಕು.

ವಿಧವಾ ವಿವಾಹಕ್ಕೆ ಸಂಬAಧಿಸಿದಂತೆ ಈ ಪದ್ಧತಿ ಸದ್ಯಕ್ಕೆ ಹಿತಕರವಾದುದಲ್ಲ ಎನ್ನುವ ಅಭಿಪ್ರಾಯ ಅವರ ಕಾದಂಬರಿಗಳಲ್ಲಿ ವ್ಯಕ್ತವಾಗಿದೆ. ಇದು ತಿರುಮಲಾಂಬಾ ಅವರ ಅಭಿಪ್ರಾಯವೂ ಕೂಡಾ ಹೌದು. ಆಧುನಿಕತೆಗೆ ತೆರೆದುಕೊಳ್ಳುವ ಸಮಯದ ದ್ವಂದ್ವಾತ್ಮಕ ನಿಲುವು, ಹೊಯ್ದಾಟಗಳನ್ನು ಇದು ತಿಳಿಸುತ್ತದೆ. ಶಿಕ್ಷಣವನ್ನು ಕೊಡಬೇಕು ಎಂದಾಗಲೂ ಎಂತಹ ಶಿಕ್ಷಣ ಬೇಕು ಎನ್ನುವುದನ್ನು ಸಾಂಪ್ರದಾಯಿಕ ವ್ಯವಸ್ಥೆಯ ಚೌಕಟ್ಟಿನಲ್ಲೇ ಚಿಂತಿಸುತ್ತಾರೆ. ದೇಶಾಚಾರ ಪದ್ಧತಿ, ಮತಬೋಧೆ, ಪೂರ್ವಜರ ಕಟ್ಟಳೆಗಳಲ್ಲಿ ಪರಿಶ್ರಮ ಇವೆಲ್ಲವೂ ಇದ್ದುಕೊಂಡೇ ಶಿಕ್ಷಣ ಪಡೆಯಬೇಕು ಎಂಬ ಅಭಿಪ್ರಾಯ ಇಲ್ಲಿ ಕಾಣುತ್ತದೆ. ಮತ್ತು ಈ ಶಿಕ್ಷಣ ಮನೆವಾಳ್ತೆಯನ್ನು ನಡೆಸಿಕೊಂಡು ಹೋಗಲು ಹೆಣ್ಣಿಗೆ ನೆರವಾಗುತ್ತದೆ

ಎಂಬುದಕ್ಕೆ ಇಲ್ಲಿ ಒತ್ತು ಇದೆ. ಅಂದಿನ ಸಂದರ್ಭದಲ್ಲಿ ಮತ್ತೆ ಮತ್ತೆ ಕೇಳಿಬರುವ ಗೃಹವಾದಿನಿ, ಆರ್ಯಕುಲಾಂಗನೆ, ಆರ್ಯಮಣಿ ಮುಂತಾದ ಪದಗಳು ಇದನ್ನು ತುಂಬಾ ಚೆನ್ನಾಗಿ ವಿವರಿಸುತ್ತವೆ. ಇವೆಲ್ಲವೂ ವ್ಯವಸ್ಥೆಯ ಒಳಗೆ ಬದಲಾವಣೆ, ಅವಕಾಶ ಮಾಡಿಕೊಳ್ಳುವ ಬಗೆಯವು.

ಆರ್.ಕಲ್ಯಾಣಮ್ಮ ಅವರ 'ನಿರ್ಭಾಗ್ಯವನಿತೆ' ಕಾದಂಬರಿಯಲ್ಲಿ ವಿಧವಾ ವಿವಾಹದ ಕುರಿತು ಸಾಕಷ್ಟು ದೀರ್ಘವಾಗಿ ಚರ್ಚೆ ಬರುತ್ತದೆ. ಈ ಸಂದರ್ಭದ ಕಾದಂಬರಿಗಳಲ್ಲಿ ಬರಹಗಾರರು ತಮ್ಮ ನಿಲುವನ್ನು ತಮ್ಮ ಪಾತ್ರಗಳ ಮೂಲಕ ತಿಳಿಸಲು ದೀರ್ಘವಾಗಿ ವಾಗ್ವಾದಗಳನ್ನು ನಡೆಸುವ ಬಗೆಯನ್ನು ನೋಡಬಹುದು. ತಾಯಿಯ ವಿರೋಧ ಇದ್ದರೂ ಕೂಡಾ ಸಣ್ಣವಯಸ್ಸಿನಲ್ಲಿ ತಂದೆ ಇಂದಿರೆಯ ಮದುವೆ ಮಾಡುತ್ತಾನೆ. ಇಂದಿರೆ ವಿಧವೆಯಾದಾಗ ತಾಯಿ ಅದೇ ಕೊರಗಿನಿಂದ ಸಾಯುತ್ತಾಳೆ. ಅದೇ ತಂದೆ ತಾನು ವಿಧುರ ಆದಾಗ ಮರುಮದುವೆ ಮಾಡಿಕೊಳ್ಳುತ್ತಾನೆ. ಇಂದಿರೆಗೆ ಮರುಮದುವೆ ಮಾಡುವ ಪ್ರಯತ್ನ ನಡೆಸುವಾಗಲೂ ಇಲ್ಲಿ ಅದಕ್ಕೆ ಸಮರ್ಥನೆಯನ್ನು ಧರ್ಮಶಾಸ್ತ್ರಗಳಲ್ಲಿ ಹುಡುಕುವ ಯತ್ನ ಮಾಡಲಾಗಿದೆ. ಕೊನೆಗೆ ಬ್ರಹ್ಮಸಮಾಜದ ಮೂಲಕ ಅವಳ ಮರುಮದುವೆಯಾಗುತ್ತದೆ. ಇಲ್ಲಿ ಪಿತೃಸಂಸ್ಕೃತಿ ಸೃಷ್ಟಿಸಿದ ಕೇಡಿಗೆ ಪರಿಹಾರವನ್ನು ಅದರ ಚೌಕಟ್ಟಿನೊಳಗೇ ಕಂಡುಕೊಳ್ಳುವ ಬಗೆ ಕಾಣುತ್ತದೆ.

ಎಂ.ಕೆ.ಇಂದಿರಾ ಅವರ 'ಗೆಜ್ಜೆಪೂಜೆ, 'ಫಣಿಯಮ್ಮ, 'ತಗ್ಗಿನಮನೆ ಸೀತೆ'ಕಾದಂಬರಿಗಳಲ್ಲಿ ಕಟ್ಟುಪಾಡುಗಳನ್ನು ಮೀರಲು, ವ್ಯವಸ್ಥೆಯೊಳಗೇ ಜೀವಂತಿಕೆ ಉಳಿಸಿಕೊಳ್ಳಲು ಹವಣಿಸುವ ಪಾತ್ರಗಳನ್ನು ನೋಡುತ್ತೇವೆ. ಫಣಿಯಮ್ಮ ಹಲವರ ಪ್ರತಿರೋಧದ ಹೊರತಾಗಿಯೂ ಹಸಲರ ಬೈರನ ಮಗಳ ಹೆರಿಗೆ ಮಾಡಿಸುತ್ತಾಳೆ. ಬಾಲವಿಧವೆ ದಾಕ್ಷಾಯಣಿಯ ತಲೆಬೋಳಿಸುವುದನ್ನು ಈಕೆ ವಿರೋಧಿಸುತ್ತಾಳೆ. 'ತಗ್ಗಿನಮನೆ ಸೀತೆ' ಕೃತಿಯ ಸೀತೆ ಸಾಂಪ್ರದಾಯಿಕ ಚೌಕಟ್ಟಿನೊಳಗೇ ದಿಟ್ಟತನ ತೋರುವವಳು. 'ಗೆಜ್ಜೆಪೂಜೆ' ಕಾದಂಬರಿ ಅನೇಕ ಕಾರಣಗಳಿಗೆ ಮುಖ್ಯವಾದ ಕೃತಿಯಾಗಿದೆ. ಇಲ್ಲಿ ದೇವದಾಸಿಯ ಮಗಳಾದ ಚಂದ್ರಾ ಕನಸುಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದೇ ದುರಂತ ಕಾಣುತ್ತಾಳೆ. ವಿವಾಹವೇ ಅವಳಿಗೆ ವಿಮೋಚನೆ ಅಂದುಕೊಳ್ಳುವ ಮನಸ್ಥಿತಿ ಇಲ್ಲಿದೆ. ಆದರೆ ನಮ್ಮ ಕುಟುಂಬ ವ್ಯವಸ್ಥೆ ಹೆಣ್ಣಿನ ಚೈತನ್ಯವನ್ನು ದಮನಿಸುವ ಸಂಗತಿಗಳನ್ನು ಒಡಲೊಳಗೆ ಇರಿಸಿಕೊಂಡ ವ್ಯವಸ್ಥೆ. ಹಾಗೆ ನೋಡಿದರೆ ಕನ್ನಡದ ಬಹುಪಾಲು ಮಹಿಳಾ ಕಾದಂಬರಿಗಳು ಕುಟುಂಬ ವ್ಯವಸ್ಥೆಯೊಳಗೇ ಆಪರೇಟ್ ಆಗುತ್ತಾ ಇವೆ. ಪಾತ್ರಗಳ ಸುಖ, ದುಃಖಗಳಿಗೆ ಅವರ, ಜೊತೆಗಿರುವವರ ವೈಯಕ್ತಿಕ ಗುಣಾವಗುಣಗಳು ಕಾರಣವೋ ಅಥವಾ ಒಟ್ಟು ವ್ಯವಸ್ಥೆ ಕಾರಣವೋ ಎಂಬ ಬಗೆಗಿನ ಸೂಕ್ಷ್ಮ ಶೋಧ ಕಾಣುವುದಿಲ್ಲ. ಮೌಢ್ಯ, ತಾರತಮ್ಯ ಎಲ್ಲವನ್ನೂ ಪ್ರಶ್ನೆ ಮಾಡುತ್ತಲೇ ಕುಟುಂಬವೇ 'ಪೊರೆಯುವ ತಾಣ'ಎಂಬ ಬಲವಾದ ನಂಬಿಕೆ ಅನೇಕ ಕೃತಿಗಳಲ್ಲಿವೆ. ಆದರೆ ಕುಟುಂಬದ ವಿನ್ಯಾಸದಲ್ಲೇ ಹಲವು ಸಮಸ್ಯೆಗಳಿವೆ. ಇದನ್ನು ಗುರುತಿಸದ ಹೊರತು ಯಾವ ನಡೆಯೂ ತಾರ್ಕಿಕ ಅಂತ್ಯ ತಲುಪದೇ ಒಂದು ಹಂತದ ನಂತರ ಅಲ್ಲಲ್ಲೇ ಸುತ್ತುತ್ತಾ ಸಮಸ್ಯೆಗಳು ಹಾಗೆಯೇ ಮುಂದುವರೆಯುತ್ತವೆ.

ತ್ರಿವೇಣಿಯವರ 'ಕಂಕಣ' ಮತ್ತು 'ಮುಕ್ತಿ' ಕೃತಿಗಳು ಆರು ಮಂದಿ ಹೆಣ್ಣುಮಕ್ಕಳ ಬದುಕಿನ ಸುತ್ತ ಹೆಣೆದುಕೊಂಡ ಕಥಾಸಂವಿಧಾನವನ್ನು ಹೊಂದಿವೆ. ಇವರಲ್ಲಿ ಒಬ್ಬಳು ಕಪ್ಪು, ಇನ್ನೊಬ್ಬಳು ಜಾಸ್ತಿ ಓದಿದ್ದಾಳೆ, ಮತ್ತೊಬ್ಬಳ ಗ್ರಹಗತಿಯಲ್ಲಿ ದೋಷ ಇದೆ ಮುಂತಾದ ಕಾರಣಗಳಿಂದ ಐವರು ನವೆಯುತ್ತಿರುತ್ತಾರೆ. ಅಂಬಿಕೆ ಅನ್ನುವ ಒಬ್ಬ ಹೆಣ್ಣುಮಗಳು ಮದುವೆಯಾಗಿ ಸಮಾಜ ಮತ್ತು ಕುಟುಂಬ ವಿಧಿಸುವ ಎಲ್ಲ ಕಟ್ಟುಪಾಡುಗಳನ್ನು ಒಪ್ಪಿಕೊಂಡೇ ಬದುಕುತ್ತಾಳೆ. ಎಲ್ಲವನ್ನೂ ಒಪ್ಪಿಕೊಂಡು ನಮ್ಮ ರೆಕ್ಕೆಪುಕ್ಕಗಳನ್ನೆಲ್ಲ ಕತ್ತರಿಸಿಕೊಂಡು ಸಂಕುಚಿತಗೊಳಿಸಿಕೊಂಡು ಬದುಕಿದಾಗ ಒಂದು ಮಟ್ಟದ

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 08, Iss 01, 2019

ನೆಮ್ಮದಿಯ ಬದುಕು ಸಾಧ್ಯವಾಗುವ ಕಟುವಾಸ್ತವ ಇಲ್ಲಿದೆ. ಇದನ್ನು ಮೇಲೆ ಎತ್ತಿದ ಕುಟುಂಬ ವ್ಯವಸ್ಥೆ ಕುರಿತಾದ ಪ್ರಶ್ನೆಯ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ.

ಅನುಪಮಾ ನಿರಂಜನವರ ಕಾದಂಬರಿಗಳಲ್ಲಿ ಶೋಷಣೆಯನ್ನು ದಿಟ್ಟವಾಗಿ ಪ್ರಶ್ನಿಸುವ ಪಾತ್ರಗಳಿವೆ. 'ಮಾಧವಿ' ಕಾದಂಬರಿಯ ಮಾಧವಿ ತಂದೆಯಿಂದ ಗಾಲವನಿಗೆ ದಾನವಾಗಿ ಕೊಡಲ್ಪಟ್ಟು ವಿಕ್ರಯಗೊಂಡು ತುಂಬಾ ನೋವು ಅನುಭವಿಸುತ್ತಾಳೆ. ಕೊನೆಯಲ್ಲಿ ತಂದೆ ಏರ್ಪಡಿಸುವ ಸ್ವಯಂವರವನ್ನು ಆಕೆ ಧಿಕ್ಕರಿಸುತ್ತಾಳೆ. ವೀಣಾ ಶಾಂತೇಶ್ವರ ಅವರ 'ಗಂಡಸರು' ಮತ್ತು 'ಶೋಷಣೆ-ಬಂಡಾಯ ಇತ್ಯಾದಿ' ಕಾದಂಬರಿಗಳ ಪಾತ್ರಗಳು ಮೇಲಿನ ಎಲ್ಲ ಪಾತ್ರಗಳಿಗಿಂತ ಭಿನ್ನವಾಗಿ, ವಿಶಿಷ್ಟವಾಗಿ ನಿಲ್ಲುತ್ತವೆ. ಇಲ್ಲಿನ ಶಾಂತಿ, ಶಶಿ ಮುಂತಾದ ಹೆಣ್ಣುಮಕ್ಕಳಿಗೆ ಕಟ್ಟುಪಾಡುಗಳ ಅರಿವಿದೆ, ಅವುಗಳನ್ನು ಮೀರುವ ದಿಟ್ಟತನವಿದೆ. ಜೊತೆಗೆ ಇವರಿಗೆ ತಮ್ಮ ದೇಹದ ಕುರಿತಾದ ಅರಿವು, ಲೈಂಗಿಕತೆಯ ಅರಿವಿದೆ. ಆದರೆ ಇಂತಹ ಪಾತ್ರಗಳೂ ಕೊನೆಗೆ ಭ್ರಮನಿರಸನಕ್ಕೆ ಒಳಗಾಗುವುದು ಯಾಕೆ? ನಮ್ಮ ಕಥನಗಳಲ್ಲಿ ಅಸಾಂಪ್ರದಾಯಿಕ ಪಾತ್ರಗಳು ಯಾಕೆ ದುರಂತ ಕಾಣುತ್ತವೆ? ತಮ್ಮತನವನ್ನು ಹೊರಗೆ ಹಾಕುವ ಹೆಣ್ಣುಮಕ್ಕಳನ್ನು ವ್ಯವಸ್ಥೆ ಸೋಲುವ ಹಾಗೆ ಮಾಡುತ್ತದೆ; ಕೊನೆಗೆ ಅವರು ಹುಂಬರಂತೆ ಕಾಣುವಂತೆ ಮಾಡುತ್ತದೆ. ಇದು ಹೆಣ್ಣುಮಕ್ಕಳ ವಿಚಾರದಲ್ಲಿ ಮಾತ್ರವಲ್ಲ ಎಲ್ಲರ ವಿಚಾರದಲ್ಲೂ ನಿಜ. ಈ ಮೂಲಕ ಸಮಾಜ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಕೆಲಸ ಮಾಡುತ್ತದೆ. ಇಲ್ಲಿ ಸಮಾಜದಲ್ಲಿ ಇಲ್ಲದ ವಾಸ್ತವವನ್ನು ಕಾದಂಬರಿಯಲ್ಲಿ ಹೇಗೆ ತರಲು ಸಾಧ್ಯ? ಅನ್ನುವುದು ಒಂದು ಪ್ರಶ್ನೆಯಾದರೆ ವಾಸ್ತವದಲ್ಲಿ ಕಷ್ಟಸಾಧ್ಯವಾಗಿರುವುದನ್ನು ಕನಿಷ್ಟ ಬರವಣಿಗೆಯಲ್ಲಾದರೂ ಮೀರಲು ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ಇನ್ನೊಂದು ಪ್ರಶ್ನೆ.

ಗೀತಾ ನಾಗಭೂಷಣ, ಬಿ.ಟಿ.ಲಲಿತಾ ನಾಯಕ್ ಅವರ ಕಾದಂಬರಿಗಳು ಪುರುಷ ಪ್ರಧಾನ ವ್ಯವಸ್ಥೆ, ಜಾತಿ ವ್ಯವಸ್ಥೆ, ಊಳಿಗಮಾನ್ಯ ವ್ಯವಸ್ಥೆ ಎಲ್ಲವೂ ಸೇರಿ ಹೇಗೆ ಹೆಣ್ಣಿನ ಬದುಕನ್ನು ದುರ್ಭರಗೊಳಿಸಿವೆ ಎಂಬುದನ್ನು ತೆರೆದು ತೋರುತ್ತವೆ. ಗೀತಾ ಅವರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿ ಲಕ್ಷ್ಮಿ ಹೊಟ್ಟೆಯಲ್ಲಿ ಹುಟ್ಟಿದ ಗಂಡುಮಗುವನ್ನು ಅವನೂ ಇತರ ಪುರುಷರಂತೆ ಶೋಷಕನಾಗುವುದು ಬೇಡ ಎಂದು ಸಾಯಿಸುವ ತೀವ್ರ ನಿಲುವು ಕಾಣುತ್ತದೆ. ಬಿ.ಟಿ.ಲಲಿತಾನಾಯಕ್ ಅವರ 'ಗತಿ' ಕೃತಿಯ ಸೋನಿ ಗಂಡನಿಂದ ನಿರಂತರ ದೌರ್ಜನ್ಯಕ್ಕೊಳಗಾಗಿ ಶಿಕ್ಷಣದ ಮೂಲಕ ವಿರೋಧಿಸುವ ಶಕ್ತಿ ಪಡೆಯುತ್ತಾಳೆ. ಜಾತಿ, ಬಡತನ ಮತ್ತು ಹೆಣ್ಣು ಈ ಮೂರೂ ನೆಲೆಗಳಲ್ಲಿ ದಮನಕ್ಕೊಳಗಾಗ ಹೆಣ್ಣುಮಕ್ಕಳ ಈ ಚಿತ್ರಗಳು ಪಿತೃಸಂಸ್ಕೃತಿಯ ವಿಕರಾಳ ರೂಪವನ್ನು ದರ್ಶಿಸುತ್ತವೆ. ಧರ್ಮ ಎನ್ನುವುದು ಹೆಣ್ಣುಮಕ್ಕಳ ಬದುಕನ್ನು ಆಡಿಸುವ ನಿರ್ದೇಶಿಸುವ ಸೂತ್ರವಾಗಿಯೇ ಉದ್ದಕ್ಕೂ ಕೆಲಸ ಮಾಡುತ್ತಾ ಬಂದಿದೆ. ಮಠಗಳು, ದೇವಸ್ಥಾನಗಳು, ಮಸೀದಿಗಳು ಸೂತ್ರಧಾರಿಗಳಾಗಿವೆ. ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಕೃತಿ ಧರ್ಮದ ಕಬಂಧ ಬಾಹುಗಳಲ್ಲಿ ಹೆಣ್ಣಿನ ಬದುಕು ನಲುಗಿಹೋಗುವುದನ್ನು ಚಿತ್ರಿಸಿದೆ. ಇಲ್ಲಿ ತಂದೆಯ ಪ್ರತಿಷ್ಠೆ, ಗಂಡನ ಪ್ರತಿಷ್ಠೆ, ಧಾರ್ಮಿಕ ಕಟ್ಟುಪಾಡುಗಳ ಮಧ್ಯೆ ಸಿಲುಕಿ ನಾದಿರಾಳ ಬದುಕು ದುರಂತದಲ್ಲಿ ಕೊನೆಗೊಳ್ಳುತ್ತದೆ.

ಇತ್ತೀಚೆಗೆ ಬಂದಿರುವ ಸವಿತಾ ನಾಗಭೂಷಣ ಅವರ 'ಸ್ತ್ರೀಲೋಕ', ಸ.ಉಷಾ ಅವರ 'ಕಸೂತಿ' ಕಾದಂಬರಿಗಳು ಬಹುತ್ವದ ನೆಲೆಯಲ್ಲಿ, ಸಾಮುದಾಯಿಕ ನೆಲೆಯಲ್ಲಿ ಬದುಕುಗಳನ್ನು ಕಟ್ಟಿಕೊಡುತ್ತವೆ. 'ಸ್ತ್ರೀಲೋಕ'ದಲ್ಲಿ ಕೇಂದ್ರ ಪಾತ್ರ ಇಲ್ಲ, ಇಲ್ಲಿ ಸ್ತ್ರೀಯರು ಪರಸ್ಪರ ಸಂವಾದ ಮಾಡುತ್ತಾ ಮಾಡುತ್ತಾ ಗಟ್ಟಿತನ ಕಂಡುಕೊಳ್ಳುತ್ತಾ ಹೋಗುತ್ತಾರೆ. 'ಕಸೂತಿ' ಎನ್ನುವುದೇ ಸ್ತ್ರೀಯರ ಬದುಕನ್ನು ಕಟ್ಟಿಕೊಡುವ ಸಮರ್ಥವಾದ ರೂಪಕ. ಇವು ಹೆಣ್ಣಿನ ಲೋಕದೃಷ್ಟಿಯಾಗಿ ಬಹಳ ಮುಖ್ಯವಾಗುತ್ತವೆ.

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 08, Iss 01, 2019

ಈ ಎಲ್ಲ ಕಾದಂಬರಿಗಳ ಮಧ್ಯೆ ನಮಗೆ ವಿಶಿಷ್ಟವಾಗಿ ಕಾಣುವುದು ಎಚ್.ನಾಗವೇಣಿ ಅವರ 'ಗಾಂಧಿ ಬಂದ ' ಮತ್ತು ಆರ್.ಸುನಂದಮ್ಮ ಅವರ 'ದ್ವಿತ್ವ' ಕಾದಂಬರಿಗಳು. ಗಾಂಧಿ ಬಂದ ಪ್ರಾದೇಶಿಕ ಸತ್ವದ ಜೊತೆಗೆ ಎಚ್ಚೆತ್ತ ದನಿಯನ್ನು ಕೇಳಿಸುವ ಕಾರಣಕ್ಕೆ ಮುಖ್ಯವೆನಿಸುತ್ತದೆ. ಇಲ್ಲಿ ವಿಧವೆಯಾದ ದ್ರೌಪದಿಯನ್ನು ಆದ್ರಾಮ ಮದುವೆಯಾಗಿದ್ದಾನೆ, ಪರಿಪೂರ್ಣ ಹೆಣ್ಣಲ್ಲ ಎಂದು ಅವಹೇಳನಕ್ಕೊಳಗಾದ ದಾರುವನ್ನು ಮಾನಪ್ಪ ಸಂಗಾತಿಯಾಗಿ ಒಪ್ಪಿಕೊಂಡಿದ್ದಾನೆ. ಬದುಕಲ್ಲಿ ಸಾಕಷ್ಟು ಕಂಡುಂಡ ಪುಟ್ಟಮ್ಮಕ್ಕ ಗಂಡನ ವಿರೋಧದ ನಡುವೆಯೇ ಗಾಂಧಿಯನ್ನು ನೋಡುವುದಕ್ಕೆ ಒಡವೆ ಗಂಟು ಕಟ್ಟಿಕೊಂಡು ಹೊರಟಿದ್ದಾಳೆ. ಜೀತದಾಳುಗಳು ಒಡೆಯನ ಆಜ್ಞೆಯನ್ನು ಧಿಕ್ಕರಿಸಿ ಗಾಂಧಿಯನ್ನು ನೋಡಲು ಹೊರಟಿದ್ದಾರೆ. ಇವರಿಗೆ ತಮಗಾಗುತ್ತಿರುವ ಶೋಷಣೆಯ ಅರಿವಿದೆ. ಇದರೊಂದಿಗೆ ತಳಸಮುದಾಯಗಳಲ್ಲಿ, ಹೆಣ್ಣುಮಕ್ಕಳಲ್ಲಿನ ಎಚ್ಚೆತ್ತ ಪ್ರಜ್ಞೆಯನ್ನು ಈ ಕೃತಿ ಸಮರ್ಥವಾಗಿ ದಾಖಲಿಸಿದೆ. 'ದ್ವಿತ್ವ' ಕಾದಂಬರಿ ಗ್ರಾಮೀಣ ಬದುಕಿನ ವಿವಿಧ ಸ್ತರಗಳ ಹಿನ್ನೆಲೆಯಲ್ಲಿ ಹೆಣ್ಣುಮಕ್ಕಳ ಬದುಕನ್ನು, ಅವರ ಸ್ಥೈರ್ಯ, ಸ್ವ ಅರಿವು ಮತ್ತು ಬೆಸುಗೆಯನ್ನು ವಿವರಪೂರ್ಣವಾಗಿ ಅನಾವರಣಗೊಳಿಸಿದೆ. ಅಧಿಕಾರ ಕೇಂದ್ರವನ್ನು ಪ್ರಶ್ನಿಸುವ, ತಮ್ಮನ್ನು ಕಂಡುಕೊಳ್ಳುವ ಈ ಎಚ್ಚರ ಈ ಕೃತಿಗಳನ್ನು ಅನನ್ಯವಾಗಿಸಿದೆ.

ಕನ್ನಡ ಮಹಿಳಾ ಕಾದಂಬರಿಗಳು ಬಹುತೇಕ ಕುಟುಂಬದ ಹಿನ್ನೆಲೆಯಲ್ಲೇ ಮೂಡಿಬಂದಿವೆ. ಕುಟುಂಬ ಎನ್ನುವುದೇ ಪಿತೃಪ್ರಾಧಾನ್ಯತೆಯ ವಿನ್ಯಾಸ ಹೊಂದಿರುವಂಥದ್ದು. ಇಲ್ಲಿ ಕಾಣುವ ಸಂಬಂಧಗಳೂ ಹಿಟಿರೋ ಸೆಕ್ಷುಯಲ್ ನೆಲೆಯವು. ಚಂಪಾವತಿಯವರ 'ಶಿವಗಂಗಾ'ದಲ್ಲಿ ಒಂದು ಲೆಸ್ಬಿಯನ್ ಸಂಬಂಧದ ಉದಾಹರಣೆ ಬರುತ್ತದೆ. ಕಾವ್ಯಾ ಕಡಮೆಯವರು 'ಪುನರಪಿ' ಕಾದಂಬರಿಯನ್ನು ಲೆಸ್ಬಿಯನ್ ಜೋಡಿಗಳ ಸುತ್ತ ಹೆಣೆದಿದ್ದಾರೆ. ಇಲ್ಲಿ ಅನುಷಾ ಮತ್ತು ಆಸ್ಮಾ ಎಂಬ ಜೋಡಿಗಳು ಬರುತ್ತವೆ. ಇಲ್ಲಿ ಗಂಡಿನ ರೋಲ್ ಪ್ಲೇ ಮಾಡುವ ಅನುಷಾ ಪಾತ್ರ, ಸಾಂಪ್ರದಾಯಿಕ ಆವರಣದಲ್ಲಿ ಗಂಡು ವರ್ತಿಸುವ ಬಗೆಯಲ್ಲಿ ನಿರ್ಲಕ್ಷ್ಯದಿಂದ ಇರುವಂತೆ ಇದೆ. ಅಡುಗೆ ಬಗ್ಗೆ ನಿರಾಸಕ್ತಿ ತೋರುವ, ಎಲ್ಲೆಂದರಲ್ಲಿ ಬಟ್ಟೆ ಹಾಕುವ, ಭಾವುಕತೆಯನ್ನು ನಿರಾಕರಿಸುವ ಈ ಬಗೆ ಪುರುಷ ಪ್ರಧಾನ ವ್ಯವಸ್ಥೆಯೊಳಗಣ ಗಂಡಿನ ಮಾದರಿಯೇ ಆಗಿದೆ. ಅಂದರೆ ವಿಮೋಚನೆ ಎಂದು ಭಾವಿಸಿದ ಸಂಬಂಧಗಳಲ್ಲೂ ಪಿತೃಪ್ರಾಧಾನ್ಯದ ನೆರಳಿನಿಂದ ಬಿಡಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ರಾಜಕೀಯ ಸಮರ್ಪಕತೆಯ ಕಾರಣಕ್ಕೆ ಎಷ್ಟೋ ಸಂಗತಿಗಳನ್ನು ಒಪ್ಪಿಕೊಳ್ಳುತ್ತಿರುವ ಹೊತ್ತಿನಲ್ಲೂ ಅದರಾಚೆಗೆ ಸೂಕ್ಷ್ಮ ನೆಲೆಯಲ್ಲಿ ಇಂಥ ಸಂಗತಿಗಳನ್ನು ಸಾಮಾಜಿಕ, ಮನೋವೈಜ್ಞಾನಿಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ.

ಪಿತೃಸಂಸ್ಕೃತಿ ಎನ್ನುವುದು ಕುಟುಂಬದಿಂದ ಮೊದಲುಗೊಂಡು ಎಲ್ಲವನ್ನೂ ಆವರಿಸಿಕೊಂಡಿದೆ. ಹೀಗಾಗಿ ಸಮಾಜ, ಕುಟುಂಬದ ಚೌಕಟ್ಟಿನೊಳಗೆ ಮತ್ತು ಅದರಾಚೆಗೆ ತನ್ನತನದ ಹುಡುಕಾಟ ಈ ಎಲ್ಲ ಕೃತಿಗಳಲ್ಲಿ ಕಾಣುತ್ತದೆ. ಎಲ್ಲ ಬರವಣಿಗೆಗಳನ್ನು ಗಮನಿಸಿದಾಗಲೂ ನಮಗೆ ಈ ಚೌಕಟ್ಟಿನೊಳಗೊಂದು ಸಮಸ್ಯೆ ಇದೆ ಅಂತ ಗೊತ್ತಿದೆ, ಆದರೆ ಹೊರಗೆ ಬರುವ ಹಾದಿಯ ಹುಟುಕಾಟ ಇನ್ನು ನಡೆದೇ ಇದೆ ಎಂಬುದು ಅರ್ಥವಾಗುತ್ತದೆ. ಈ ಅರ್ಥದಲ್ಲಿ ಎಲ್ಲ ಕಾದಂಬರಿಗಳೂ ಪ್ರತಿಕ್ರಿಯಾತ್ಮಕವಾಗಿವೆ. ನಮ್ಮ ಅರಳುವಿಕೆಯನ್ನು ದಮನಿಸುವ ವ್ಯವಸ್ಥೆಗೆ ಮುಖಾಮುಖಿಯಾಗದೇ ಹೊರಬರುವ ದಾರಿ ಕಾಣದು. ಸಂಪೂರ್ಣ ಬಿಡಿಸಿಕೊಳ್ಳುವುದು ಸಾಧ್ಯವಾಗದಿದ್ದರೂ ಈ ಪ್ರಕ್ರಿಯೆಯಲ್ಲಿ ನಮ್ಮ ಬರಹ, ಚಿಂತನೆ ಸಾಗಿದೆ. ಯಾಕೆಂದರೆ ಬದುಕಲ್ಲಿ, ಬರಹದಲ್ಲಿ ಮೀರುವುದು ಜೊತೆಜೊತೆಯಾಗೇ ಆಗಬೇಕಾದ ಸಂಗತಿಯಾದ್ದರಿಂದ ಈ ಪ್ರಕ್ರಿಯೆಯಲ್ಲಿ ನಾವೆಲ್ಲರೂ ಇದ್ದೇವೆ ಎಂದಷ್ಟೇ ಹೇಳಬಹುದು.

ಡಾ.ಭಾರತಿ ದೇವಿ.ಪಿ
ಕನ್ನಡ ಸಹಾಯಕಪ್ರಾಧ್ಯಾಪಕಿ,

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 08, Iss 01, 2019

ಮಹಿಳಾ ಸರ್ಕಾರಿ ಗೃಹವಿಜ್ಞಾನ ಕಾಲೇಜು,
ಹೊಳೆನರಸೀಪುರ, ಹಾಸನ-೫೭೩೨೧೧